ಅ.ದಾ. ನಂ. 365/23 ಪಿ .ಡಬ್ಲ್ಯೂ-1

ದಿನಾಂಕಃ 06.06.2026 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ**

1. ನನ್ನ ತಂದೆ ಎಲ್ಲಿದ್ದಾರೆ ಎಂದರೆ ಊರಿನಲ್ಲಿದ್ದಾರೆ. ಈಗಲೂ ನನ್ನ ತಂದೆ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಯಾವ ಕಾರಣಕ್ಕೆ ನನಗೆ ಜಿ.ಪಿ.ಎ ಕೊಟ್ಟಿರುತ್ತಾರೆ ಎಂದರೆ ಅವರಿಗೆ ಕಣ್ಣು ಸರಿಯಾಗಿ ಕಾಣುವುದಿಲ್ಲ ಮತ್ತು ಆರೋಗ್ಯ ಸಮಸ್ಯೆ ಇರುವ ಕಾರಣ. ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿ ಹಾಜರುಪಡಿಸಿರುವುದಿಲ್ಲ.

2. ದಾವಾ ಸ.ನಂ.144. ಅದರ ಒಟ್ಟು ವಿಸ್ತೀರ್ಣ ಏನು ಎಂದರೆ ಗೊತ್ತಿಲ್ಲ. ಸ.ನಂ.144 ದುರಸ್ತಿಯಾಗಿದೆಯೇ ಎಂದರೆ ಇಲ್ಲ. ಸ.ನಂ.144 ರಲ್ಲಿ ಒಟ್ಟು 72 ಎಕರೆ ಜಮೀನಿದೆ ಎಂದರೆ ಸರಿ. ಸದರಿ 72 ಎಕರೆಯಲ್ಲಿ ನನ್ನ ತಂದೆಗೆ ಮಂಜೂರಾಗಿರುವ ಸ್ವತ್ತು ಎಲ್ಲಿ ಬರುತ್ತದೆ ಎಂದು ತೋರಿಸಲು ನಕಾಶೆ ಇದೆಯೇ ಎಂದರೆ ಹೌದು. ಅದನ್ನು ಹಾಜರುಪಡಿಸಿರುತ್ತೇನೆ. ಸದರಿ ನಕಾಶೆಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 72 ಎಕರೆ ಪೈಕಿ ಸು.42 ಜನರಿಗೆ ಜಮೀನು ಮಂಜೂರಾಗಿರುತ್ತದೆ ಎಂದರೆ 28 ಜನರಿಗೆ ಮಂಜೂರಾಗಿರುತ್ತದೆ. ಸದರಿ 28 ಜನರು ಎಲ್ಲಿ ಸಾಗುವಳಿ ಮಾಡುತ್ತಿದ್ದರು ಅದೇ ಜಾಗಕ್ಕೆ ಸಂಬಂಧಪಟ್ಟಂತೆ ನಕಾಶೆ ನೀಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಉಳುಮೆ ಮಾಡುತ್ತಿದ್ದ ಜಾಗಕ್ಕೆ ಸಂಬಂಧಪಟ್ಟಂತೆ ನಕಾಶೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯು ಚಿಕ್ಕಕಣಗಾಲಿಗೆ ಹೋಗುವ ರಸ್ತೆಯ ಎರಡೂ ಬದಿಯಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಗೂ ಜಮೀನು ಮಂಜೂರಾಗಿರುತ್ತದೆ ಎಂದರೆ ಸರಿಯಲ್ಲ. ಸ.ನಂ.144 ರ 72 ಎಕರೆ ಒಳಗೆ ಪ್ರತಿವಾದಿಯ ಜಮೀನಿದೆ ಎಂದರೆ ಸರಿಯಲ್ಲ.

3. ಏನೆಂದು ದಾವೆ ಹೂಡಿರುತ್ತೇನೆ ಎಂದರೆ ನಮಗೆ ಪ್ರತಿವಾದಿ ತೊಂದರೆ

ಕೊಡುತ್ತಿದ್ದಾರೆ ಎಂದು. ವಾದಪತ್ರದಲ್ಲಿ ಸು.25 ವರ್ಷಗಳ ಹಿಂದೆ ನನ್ನ ತಂದೆ ಪ್ರತಿವಾದಿಗೆ ಜಮೀನು ಬಿಟ್ಟು ಪುನಃ ಜಮೀನನ್ನು ಕೊಡುತ್ತಿಲ್ಲ ಎಂದು ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ಜಮೀನನ್ನು ನಾವೇ ವ್ಯವಸಾಯ ಮಾಡುತ್ತಿದ್ದು ನಮ್ಮ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದಾರೆ ಎಂದು ದಾವೆ ಹೂಡಿರುತ್ತೇನೆ.

4. ದಾವಾ ಸ್ವತ್ತು ಪ್ರತಿವಾದಿಯ ತಂದೆಗೆ ಮಂಜೂರಾಗಿರುವ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಚೆಕ್ಕುಬಂದಿ ಏನು ಎಂದರೆ ಉ-ರೇಣುಕಮ್ಮ, ದ-ಚನ್ನಮ್ಮ, ಪೂ-ರಸ್ತೆ, ಪ-ಕಚೇರಯ್ಯ ರವರ ಜಮೀನು. ಸದರಿ ಸ್ವತ್ತು ಪ್ರತಿವಾದಿಗೆ ಮಂಜೂರಾಗಿರುವ ಸ್ವತ್ತು ಎಂದರೆ ಸರಿಯಲ್ಲ. ಪ್ರತಿವಾದಿಯ ಜಮೀನು ಒಂದು ಬದಿಯ ಜಮೀನನ್ನು ನಮಗೆ ಸೇರುತ್ತದೆ ಎಂದು ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ಮಂಜೂರಾತಿ ಪತ್ರದಲ್ಲಿ ಚೆಕ್ಕುಬಂದಿ ತಿಳಿಸಿರುತ್ತಾರ ಎಂದರೆ ತಿಳಿಸಿರುತ್ತಾರೆ. ಸದರಿ ವಿಚಾರ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಯಾವುದೇ ದಿಕ್ಕಿನಲ್ಲೂ ರಸ್ತೆ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ದಾಖಲಾತಿಗಳಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಒಳಗೆ ಇರುವ ಜಮೀನು ಪ್ರತಿವಾದಿಯ ತಂದೆಗೆ ಮಂಜೂರಾಗಿರುವ ಸ್ವತ್ತು ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.